# ನಾನು ಜೀವನ್ಮುಖಿ

ನಾನು... ಸ್ವತಂತ್ರ, ಸ್ವಾವಲಂಬಿ, ಸಮರ್ಥ, ಸಬಲೆ, ಸ್ವರ, ಸಂಪೂರ್ಣ...

ಈ ಪದಗಳು ಏನೇನೆಲ್ಲ ಸೂಚಿಸುತ್ತವೆ... ಸ್ವತಂತ್ರ ಅಂದಕೂಡ್ಲೆ ಶಿಸ್ತಾಗಿ ನನ್ನ ಸ್ಕೂಟಿ, ಕಾರು ಓಡಿಸಿಕೊಂಡು ಹೋಗುವ ಚಿತ್ರ ಬರ್ತದ. ಸ್ವಾವಲಂಬಿ ಅಂದ್ರ ನನ್ನ ಅಕೌಂಟು, ನನ್ನ ಪಾಸ್‌ಬುಕ್ಕು. ನನ್ನದೇ ಗಳಿಕೆ, ನನ್ನದೇ ಉಳಿಕೆ. ಸಮರ್ಥ ಕೊಟ್ಟಿರುವ ಕೆಲಸಗಳನ್ನೆಲ್ಲ ಒಂದೇ ಗುಕ್ಕಿನಲ್ಲಿ ಮುಗಿಸಿ ಬಿಡುಗಡೆಯ ಉಸಿರಿನೊಂದಿಗೆ ಚಂದನೆಯ ನಗು ಸೂಸಿ ಹೊರಡುವುದು. ಸಬಲೆ ಎಲ್ಲವನ್ನೂ ನಿಭಾಯಿಸಬಲ್ಲೆ ಎಂಬ ವಿಶ್ವಾಸ. ಆರ್ಥಿಕವಾಗಿ, ಸಾಮಾಜಿಕವಾಗಿ, ಸ್ವರ... ನನ್ನದೇ ಧ್ವನಿಯಲ್ಲಿ ನನ್ನ ಭಾವನೆಗಳಿಗೆ ಪದ ನೀಡುವಾಕೆ. ಇಲ್ಲಿ ಎಲ್ಲಿಯೂ ಬಿಕ್ಕಳಿಕೆಗಳಿಗೆ, ತುಟಿ ಕಚ್ಚಿ ಅಳು ನುಂಗುವಿಕೆಗೂ ಮೊದಲು ಪ್ರತಿ ದೂರು, ದುಮ್ಮಾನಕ್ಕೂ ಸ್ವರ ನೀಡುವಾಕೆ. ನಾನು ಸಂಪೂರ್ಣವಾಗಿ ನಾನು.

ಇಷ್ಟರೊಳಗ ನಿಮ್ಮ ಕಣ್ಮುಂದ ನಿಮ್ಮ ಸುತ್ತಲಿನ ‘ಅವಳು’ ನೆನಪಾಗಿರಬಹುದು. ಬತ್ತಿ ಹೊಸೆದಂತೆ ವಿಸ್ತಾರವಾದ ಹತ್ತಿಯೊಂದು ತನ್ನನ್ನೇ ಸುರುಳಿ ಸುತ್ತುತ್ತ, ಸುತ್ತುತ್ತ ಕೇವಲ ಹೆಂಡ್ತಿಯಾಗಿ ಉಳೀತಾಳೆ. ಮದುವೆಯಾಯ್ತು. ನನ್ನ ಇಷ್ಟಾನಿಷ್ಟಗಳನ್ನೇ ಕಳೆದುಕೊಂಡೆ ನಾನು. ನನಗೆ ಹಸಿರು... ಹಸಿರು ಬಣ್ಣ ಅಂದ್ರೆ ಪ್ರಾಣ. ಹಸಿರು ಬಣ್ಣದೊಳಗಿದ್ದಷ್ಟು ವರ್ಣವೈವಿಧ್ಯ ಮತ್ತ್ಯಾವ ಬಣ್ಣದೊಳಗೂ ಸಿಗೂದಿಲ್ಲ. ಥೇಟ್ ನನ್ನ ಮೂಡಿದ್ದಂಗ. ಖುಷಿಯೊಳಗೂ ಅವೆಷ್ಟು ಥರದ ಖುಷಿಗಳಿರ್ತಾವ ಗೊತ್ತೇನು ನಿಮಗ? ಗಂಡ ಜಗಳಾಡಿ ಹೋದಾಗ ಮನಸಿನ ಮೇಲೆ ಮೋಡ ಕವೀತದ. ಫೋನಿನ ಸ್ಕ್ರೀನಿನ ಮೇಲೊಂದು ಮೆಸೇಜಿನ ಧ್ವನಿ ಉಲಿದ್ರ ಸಾಕು, ಸಿಟ್ಟು ಸೆಡುವು ಹುಸಿಯಾಗ್ತಾವ... ಅಲ್ಲಿಂದ ಕಳಿಸಿದ ಹೂಗುಚ್ಛಕ್ಕ ನಗುಮುಖವೊಂದು ಉತ್ರ ಆಗ್ತದ. ಅದೊಂದು ಥರ ಖುಷಿ.

ಥಂಡಿ ಗಾಳಿ, ಮನಿ ಬಾಗ್ಲು ಕಿಡಕಿ ಎಲ್ಲಾ ಮುಚ್ಚಿದ್ರೂ ಎಲ್ಲಿಂದಲೋ ಸುಳಿಸುಳಿದು ಮನ್ಯಾಗ ಕಾಲಿಟ್ಟು ಕಚಗುಳಿ ಇಡುವ ಥಂಡಿಗಾಳಿ. ಅವಾಗ ಬಿಸಿಬಿಸೀದು ಏನರೆ ತಿನ್ನಬೇಕು ಅನ್ನೂಮುಂದ ಅಮ್ಮ ನೆನಪಾಗ್ತಾಳ. ನನ್ಮನಿ ನೆನಪಾಗ್ತದ. ನನ್ನದೇ ಹೊದಿಕಿಯೊಳಗ ಬೆಚ್ಚಗ ಕುಂತು ಬಜ್ಜಿ ತಿನ್ನೊಂತ ಛಾ ಕುಡದಿದ್ದು ನೆನಪಾಗ್ತದ... ಹೌದು...ನೋಡು ಬಜ್ಜಿ ಮಾಡೂದು ಕೇಳಬೇಕೀಗ... ಇಸದ್ದ... ಈಗಲೇ... ಕೈಗೆ ಫೋನು, ಅಮ್ಮನ ಧ್ವನಿ. ಹೆಂಗದಿ, ಏನು ಮಾಡ್ತಿ ಅಂತೆಲ್ಲ ಕೇಳುವ ಮುನ್ನವೇ ಕಾಂಧಾ ಭಜಿ ಮಾಡೂದು ಹೆಂಗ... ಅಲ್ಲಿಂದ ಆ ಕಡೆಯಿಂದ ಶುರು ಆಗ್ತದ ವಿಧಾನ. ನಾನೂ ಹಂಗೇ ಸಣ್ಣಗೆ ಹೆಚ್ಗೊಂಡು, ಹಿಟ್ಟು ಕಲಸ್ಕೊಂಡು, ಬಿಸಿ ಎಣ್ಯಾಗ ಕಾಂಧಾ ಬಿಟ್ಟಾಗ ಅವು ಅರಳ್ತಾವಲ್ಲ.. ಆಗ ನನ್ನ ಮುಖ ಅರಳೂ ಖುಷಿನೇ ಬ್ಯಾರೆ. ಇನ್ನ ಅವು ತುಟೀಲೆ ತಿನ್ನೂವಷ್ಟು